ದಿನಾಂಕ: 24.10.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿಗಳ ಪರ ಶ್ರೀ ಜಿ ಸಿ ಎಂ ವಕೀಲರಿಂದಃ**

ನಾನು 4 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ 3 ½ ಎಕರೆ ಜಮೀನು ಇದೆ. ಅದರ ಸರ್ವೆ ನಂಬರ್ 96 ಆಗಿರುತ್ತದೆ. ಅದು ಕಂಡೇನಹಳ್ಳಿ ಗ್ರಾಮದ ಆಸ್ತಿಯಾಗಿರುತ್ತದೆ. ಈ ದಾವೆಯಲ್ಲಿ ಸಾಕ್ಷಿ ನುಡಿಯಲು ನನ್ನನ್ನು ನ್ಯಾಯಾಲಯಕ್ಕೆ ಕುಮಾರ್ ಎನ್ನುವವರು ಕರೆದುಕೊಂಡು ಬಂದಿದ್ದಾರೆ. ಜಮೀನಿನ ವಿಚಾರಕ್ಕೆ ಈ ದಾವೆ ಸಲ್ಲಿಸಿರುತ್ತಾರೆ. ಆದರೆ ಸರ್ವೆ ನಂಬರ್ ಹೇಳಲು ಬರುವುದಿಲ್ಲ. ಈ ದಾವೆಗೆ ಸಬಂಧಿಸಿದ ಪಹಣಿ ಪತ್ರಿಕೆಗಳನ್ನು ನಾನು ನೋಡಿರುವುದಿಲ್ಲ.

ನಿಂಗಮ್ಮ ಕಂಡೆನಹಳ್ಳಿಗೆ ಸೇರಿದವರಾಗಿರುತ್ತಾರೆ. ಅವರ ತಂದೆ ತಾಯಿ ಹೆಸರು ನನಗೆ ಗೊತ್ತಿಲ್ಲ. ನಿಂಗಮ್ಮನ ತಂದೆಯದ್ದು ಯಾವ ಊರು ಎಂದು ನನಗೆ ಗೊತ್ತಿಲ್ಲ. ನಿಂಗಮ್ಮನವರು ಲಿಂಗಣ್ಣನವರನ್ನು ಮದುವೆಯಾಗಿರುತ್ತಾರೆ. ಲಿಂಗಣ್ಣ ಕಂಡೇನಹಳ್ಳಿಯ ವಾಸಿಯಾಗಿರುತ್ತಾರೆ. ಅವರ ಅಪ್ಪನ ಹೆಸರು ಚನ್ನೇಗೌಡ. ಅವರು ಲಿಂಗಾಯತ ಜನಾಂಗಕ್ಕೆ ಸೇರಿದವರು. ಲಿಂಗೇಗೌಡರ ಹುಟ್ಟಿದ್ದು ಕಂಡೇನಹಳ್ಳಿಯಲ್ಲಿ ನಾನು ಸಹ ಕಂಡೇನಹಳ್ಳಿಯಲ್ಲಿ ಹುಟ್ಟಿ ಬೆಳೆದಿದ್ದೇನೆ.

ಪ್ರತಿವಾದಿಗಳ ಜಮೀನಿನ ಚಕ್ಕು ಬಂದಿ ನನಗೆ ಹೇಳಲು ಬರುವುದಿಲ್ಲ. ಪ್ರತಿವಾದಿಗಳು ಜಮೀನಿನಲ್ಲಿ ಕಡ್ಡೆಗಿಡ ಹಾಕಿರುತ್ತಾರೆ. ನಮ್ಮ ಜಮೀನಿಗೂ ಅವರ ಜಮೀನಿಗೂ ½ ಕಿ.ಮೀ ಅಂತರವಿದೆ. ಪ್ರತಿವಾದಿಗಳ ಜಮೀನಿನಲ್ಲಿ ಏನು ಬೆಳೆ ಬೆಳೆದಿದ್ದಾರೆ ಎಂದು ನನಗೆ ಗೊತ್ತಿಲ್ಲದಿದ್ದರೂ ಸಹ ಪ್ರತಿವಾದಿ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜಮೀನು ಪ್ರತಿವಾದಿ 1 ರಿಂದ 5 ರವರಿಗೆ ಸೇರಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಂಗಮ್ಮ ನಮ್ಮ ಊರಿನವರೆ ಅಲ್ಲ ಎಂದರೆ ಸರಿಯಲ್ಲ. ಮೂಲ ಖರೀದಿದಾರರಿಗೂ ಮತ್ತು ಪ್ರತಿವಾದಿ 1 ರಿಂದ 5 ರವರಿಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ವಾದಿಯರೇ ದಾವಾಸ್ತಿಯನ್ನು ಖರೀದಿ ಮಾಡಿದ್ದರಿಂದ ಅವರೇ ಸ್ವಾದೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಪಹಣಿ ಯಾರ ಹೆಸರಿನಲ್ಲಿ ಇದೆ ಎಂದು ನಾನು ನೋಡಿಲ್ಲ ಸಾಕ್ಷಿ ಮುಂದುವರೆದು ಸ್ವಾದೀನ ಪ್ರತಿವಾದಿಗಳೇ ಇರುತ್ತಾರೆ ಎಂದು ನುಡಿಯುತ್ತಾರೆ. ನಿಂಗಮ್ಮನಿಗಾಗಲೀ ಅವರ ಮಕ್ಕಳಿಗಾಗಲೀ ದಾವಾಸ್ತಿಯಲ್ಲಿ ಯಾವುದೇ ಅಧಿಕಾರ ಸ್ವಾದೀನವಿಲ್ಲ ಎಂದರೆ ಸರಿಯಲ್ಲ. ವಾದಿಯ ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ಪ್ರತಿವಾದಿ 1 ರಿಂದ 5 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು